

# ಮೃಗತೃಷ್ಣ

THE MIRAGE

■ ಕೇಶವರೆಡ್ಡಿ ಹಂದ್ರಾಳ
ಕಲೆ: ಮನೋಹರ ಆಚಾರ್ಯ

## ಮತ್ತೆ ಮಳೆ, ಮತ್ತದೇ ಸೂತಕದ ಕಳೆ

'ಚಿಯರ್ಸ್' ಎಂದು ನಾನೂ ಧ್ವನಿಗೂಡಿಸಿ ಗ್ಲಾಸನ್ನು ಬಾಯಿಗಿಟ್ಟುಕೊಂಡಿದ್ದೆ. 'ಆಂ ಏನೋ ಹೇಳುತ್ತಿದ್ದೆ ಅಲ್ವಾ...' ಎಂದರು ವಿಸ್ಕಿ ಗ್ಲಾಸ್ ಟೇಬಲ್ ಮೇಲಿಡುತ್ತಾ. 'ಅದೇ ಅಪಾರ್ಟ್‌ಮೆಂಟ್ಸ್ ಬಗ್ಗೆ ಮಾತನಾಡುತ್ತಾ ಯಾರೋ ನೆಲ್ಸನ್ ಎನ್ನುವವರ ಬಗ್ಗೆ ಮಾತನಾಡ್ತಿದ್ರಿ...' ನೆನಪಿಸಿದ್ದೆ ನಾನು. 'ಗುಡ್, ಒಳ್ಳೆ ಲಿಸನಿಂಗ್ ಇದೆ ನಿಮಗೆ. ಬೇರೆಯವರ ಮಾತುಗಳನ್ನು, ಅನಿಸಿಕೆಗಳನ್ನು ಸಂಯಮದಿಂದ ಆಲಿಸೋದಿದೆಯಲ್ಲ ಅದೊಂದು ದೊಡ್ಡ ಗುಣ. ದೇಶವನ್ನು ಆಳುವ ಜನ ನಾಯಕರಿಗೆ ಮತ್ತು ಬ್ಯುರೋಕ್ರಸಿಗೆ ಆ ಗುಣ ಇಂಪಾರ್ಟೆಂಟಾಗಿ ಇರಬೇಕು. ಆದರೆ ನಮ್ಮ ದೇಶದ ರಾಜಕೀಯಕ್ಕೆ ಮತ್ತು ಆಡಳಿತಕ್ಕೆ ಇರುವ ಬಹು ದೊಡ್ಡ ದೋಷ ಎಂದರೆ ಬೇರೆಯವರನ್ನು ಆಲಿಸದೆ ಇರೋದು. ಐ ಮೀನ್ ಲ್ಯಾಕ್ ಆಫ್ ಲಿಸನಿಂಗ್. ಆಂ, ನೆಲ್ಸನ್ ಅಂತ, ನಮ್ಮ ಮೂರು ಜಿಲ್ಲೆಗಳಲ್ಲೂ ಸಾಮಾಜಿಕ ಹೋರಾಟಗಾರ ಅಂತ ಹೆಸರು ತಗೊಂಡಿದ್ದಾನೆ. ಒಂದಾನೊಂದು ಕಾಲದಲ್ಲಿ ಅವನನ್ನ ಬೆಳೆಸಿದ್ದು ನಾನೇ. ನಾವು ಕಟ್ಟಿರುವ ಅಪಾರ್ಟ್‌ಮೆಂಟ್ಸ್ ಕೋಸ್ಟಲ್ ರೆಗ್ಯುಲೇಶನ್ ಜೋನ್ ಅನ್ನು ಉಲ್ಲಂಘಿಸಿರುವುದಾಗಿ ಹೈಕೋರ್ಟ್‌ನಲ್ಲಿ ದಾವೆ ಹೂಡಿದ್ದ. ಆದರೆ ಕೋರ್ಟ್ ನಮ್ಮ ಪರವಾಗಿಯೇ ತೀರ್ಪು ನೀಡಿತ್ತು. ಅವನು ಸುಪ್ರೀಂ ಕೋರ್ಟ್‌ಗೆ ಹೋದ.

ಸುಪ್ರೀಂ ಕೋರ್ಟ್ ನಾವು ಮಾಡಿರುವುದು ತಪ್ಪೆಂದು, ನಮ್ಮವೂ ಎರಡು ಸೇರಿ ಐದು ಅಪಾರ್ಟ್‌ಮೆಂಟ್ಸ್ ಅನ್ನು ಕೆಡವಲು ಆದೇಶ ನೀಡಿದೆ. ಸರ್ಕಾರ ಪ್ರತಿ ಪ್ಲಾಟ್ ಮೇಲೆ ಇಪ್ಪತ್ತೈದು ಲಕ್ಷ ಪರಿಹಾರ ನೀಡಬೇಕೆಂದೂ ಕೋರ್ಟ್ ಆದೇಶ ನೀಡಿದೆ. ಆದರೆ ನಮಗೆ ಒಂದೊಂದು ಫ್ಲಾಟಿಗೆ ಅರವತ್ತು ಲಕ್ಷ ಖರ್ಚು ಬಿದ್ದಿದೆ. ನಮ್ಮ ಮೂರು ವರ್ಷಗಳ ಶ್ರಮಕ್ಕೆ ಬೆಲೆಯೇ ಇಲ್ಲ. ಏನನ್ನಾದರೂ ಕಟ್ಟೋದು ಕಷ್ಟ, ಆದರೆ ಕೆಡವೋದು ಸುಲಭ. ಆ ಬಗ್ಗೆ ರಿವ್ಯೂ ಪಿಟಿಷನ್ ಹಾಕಿದ್ದೀವಿ. ಆ ಅಪಾರ್ಟ್‌ಮೆಂಟ್ಸ್ ನಿರ್ಮಾಣಕ್ಕೆ ನಿಮ್ಮ ಫ್ರೆಂಡ್ ರಾಘವರೆಡ್ಡಿಯೂ ಅರ್ಧ ದುಡ್ಡು ಹಾಕಿದ್ದಾರೆ. ಒಂದು ರೀತಿ ಪಾಲುದಾರಿಕೆಯೇ, ಪಾಪ ಅನ್ನುತ್ತೆ ಆ ಮನುಷ್ಯನ ಮುಖ ನೋಡಿದರೆ...' ಮಾತು ಮುಗಿಸಿ ಮತ್ತೆ ಒಂದು ದೀರ್ಘವಾದ ಗುಟುಕು ವಿಸ್ಕಿ ಹೀರಿದ್ದರು. ಭಗವಾನ್ ಕುಟ್ಟಿ ಒಂದು ಪ್ಲೇಟ್ ತುಂಬಾ ಬಿಸಿ ಬಿಸಿ ಫಿಶ್ ಫ್ರೈ ತಂದಿಟ್ಟವನು, 'ದೇವರ ಮೂಲೆಗೆ ದೂರದಲ್ಲಿ ಮಿಂಚುತ್ತಾ ಇದೆ. ಒಳ್ಳೆ ಬಲವಾದ ಮಳೆ ಬರಬಹುದು ಅನ್ಸುತ್ತೆ. ಇವತ್ತೆಲ್ಲಾ ಸೆಕೆ, ಬಿಸಿಲು ಜೋರಾಗಿ ಇತ್ತು...' ಎಂದು ಹೇಳಿ ಮತ್ತೆ ಅಡುಗೆ ಮನೆ ಹೊಕ್ಕ.

'ನೆಲ್ಸನ್ನರನ್ನ ಕನ್ವಿನ್ಸ್ ಮಾಡಿ ಕಾಂಪ್ರೊಮೈಸ್ ಮಾಡಿಕೊಳ್ಳಬೇಕಿತ್ತು, ಒಂದಿಷ್ಟು ಹಣ ಕೊಟ್ಟು. ಅಂಥ ಕೆಲಸದಲ್ಲಿ ನಮ್ಮ ರಾಘವರೆಡ್ಡಿ ಎತ್ತಿದ ಕೈ ಕೂಡ...' ನಾನು ಸಮಾಧಾನಪಡಿಸುವ ಮಾತುಗಳನ್ನಾಡಿದ್ದೆ.

ಕೆ.ಎಮ್. ನಯ್ಯಾರ್ ಬಿಸಿಬಿಸಿ ಮೀನನ್ನು ಬಾಯಿಗಿಟ್ಟುಕೊಂಡು ಅಗಿದು ನುಂಗಿ, ಜೊತೆಗೆ ವಿಸ್ಕಿಯನ್ನೂ ಗುಟುಕರಿಸಿ, 'ಆ ನೆಲ್ಸನ್ ಈಗ ಒಂದು ಮಟ್ಟವನ್ನು ಮೀರಿಬಿಟ್ಟಿದ್ದಾನೆ. ಅವನಿಗೆ ಕೋಟಿಗಳೀಗ ಯಾವ ಲೆಕ್ಕಕ್ಕೂ ಇಲ್ಲ. ಹದಿನೈದು ವರ್ಷಗಳ ಹಿಂದೆ ಒಂದು ಸಣ್ಣ ಯೂನಿಯನ್ ಕಟ್ಟಿದವನು ಇಂದು ದೊಡ್ಡ ಲೇಬರ್ ಬ್ರೋಕರ್. ಸುಮಾರು ಹತ್ತು ಸಾವಿರ ಕಾರ್ಮಿಕರು ಅವನ ಕಂಟ್ರೋಲಲ್ಲಿ ಇದ್ದಾರೆ. ಎಲ್ಲಾ ಇಲಾಖೆಯವರು ಅವನಿಗೆ ಹೆದರುತ್ತಾರೆ. ಒಬ್ಬೊಬ್ಬ ಕಾರ್ಮಿಕನಿಂದ ದಿನಕ್ಕೆ ಹತ್ತು ರೂಪಾಯಿ ಆತನ ಅಕೌಂಟಿಗೆ ಸಂದಾಯವಾಗ್ತದೆ. ರಾಜಕಾರಣಿಗಳಿಗೆ, ಅಧಿಕಾರಿ ವರ್ಗಕ್ಕೆ ಫ್ರೀ ಲೇಬರ್ ಸಪ್ಲೈ ಮಾಡ್ತಾನೆ. ಜೊತೆಗೆ ಹ್ಯೂಮನ್ ಟ್ರಾಫಿಕ್ಕಿಂಗ್, ವುಮೆನ್ ಟ್ರಾಫಿಕ್ಕಿಂಗ್, ಎರಡೂ ಮಾಡ್ತಾನೆ. ಈಗಂತೂ ಎಂಎಲ್‌ಎಗಳ, ಮಂತ್ರಿಗಳ ಒಡನಾಟ ಅವನಿಗೆ ಮತ್ತಷ್ಟು ಬಲ ತುಂಬಿದೆ. ಉದ್ಯೋಗದ ಸಲುವಾಗಿ ವಿದೇಶಗಳಿಗೂ ಜನರನ್ನು ರಫ್ತು ಮಾಡುವ ಮಟ್ಟಕ್ಕೆ ಬೆಳೆದಿದ್ದಾನೆ. ಗಲ್ಫ್ ದೇಶಗಳಿಗಂತೂ ತುಂಬಾ ಜನಾನ ಕಳಿಸ್ತಾ ಇದಾನಂತೆ ಸೆಕ್ಸ್ ಸಲುವಾಗಿಯೇ. ಯಾವಾಗ ಸಿಕ್ಕಿಬೀಳುತ್ತಾನೋ ನೋಡಬೇಕು. ಆರಿಹೋಗುವ ಮುನ್ನ ದೀಪ ಧಾಳಾಗಿ ಉರಿಯುತ್ತದಂತೆ.

ಮೊದಮೊದಲು ಅವನಿಗೆ ಬ್ಯಾಲೆನ್ಸ್ ಆಫ್ ಟೆರರ್ ವಿದ್ಯೆಯನ್ನು ಹೇಳಿಕೊಟ್ಟವನು ನಾನೇ. ಅದೇ